ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 39-43
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು: ಒಂದು ಅವಲೋಕನ

**ಪವಿತ್ರ ವಿ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮುಳಬಾಗಿಲು ತಾಲೂಕು

**Abstract:**
*ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ ಎಂಬುದು ಒಂದು ವಿಶೇಷವಾದ ಶೀರ್ಷಿಕೆ ಅನಿಸುತ್ತದೆ ಏಕೆಂದರೆ ಇದು ಹಿಂದೆ ಬಾಂಬೆ ಪ್ರಾಂತ್ಯವಾಗಿತ್ತು. ಇಲ್ಲಿನ ರಾಜಕೀಯ ನಾಯಕರ ಬರೆಹ ಭಾಷಣಗಳು ಈ ಭಾಗದ ಜನತೆಯ ಮೇಲೆ ಹೆಚ್ಚು ಪ್ರಭಾವ ಬೀರಿದವು ಎಂಬುದರಲ್ಲಿ ಸಂಶಯವಿಲ್ಲ. 1885ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾಗಿ, ಇದರ ಮೊದಲ ಅಧಿವೇಶನ ಬೊಂಬಾಯಿಯಲ್ಲಿ ನಡೆದಾಗ ಬೆಳಗಾವಿಯಿಂದ ಬಾಬಾ ಸಾಹೇಬ್ ಬಾಟೆ ಎಂಬುವರು ಪ್ರತಿನಿಧಿಸಿದ್ದರು. ಹಾಗೂ ವಿಷ್ಣುಪಂಥ ಎಂಬವರು ಬೆಳಗಾವಿಯಿಂದ ರಾಷ್ಟ್ರೀಯ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಆನಂತರದಲ್ಲಿ ಕರ್ನಾಟಕ ಸಿಂಹ ಗಂಗಾಧರ ದೇಶಪಾಂಡೆಯವರು, ತಿಲಕರು ಮತ್ತು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಸಕ್ರಿಯ ಹೋರಾಟಗಾರರಾಗಿ ಗುರುತಿಸಿಕೊಂಡರು. 1905ರ ಸ್ವದೇಶಿ ಚಳುವಳಿಯಿಂದ 1942ರ ಕ್ವಿಟ್ ಇಂಡಿಯಾ ಚಳುವಳಿಯವರೆಗೆ ಈ ಜಿಲ್ಲೆ ಮೊದಲ ಸ್ಥಾನದಲ್ಲಿದೆ.*

**Keywords:** *ಕರ್ನಾಟಕ ಇತಿಹಾಸ, ಸ್ವದೇಶಿ ಚಳುವಳಿ, ಸ್ವಾತಂತ್ರ್ಯ ಚಳುವಳಿ, ರಾಷ್ಟ್ರೀಯ ಕಾಂಗ್ರೆಸ್.*

## ಪೀಠಿಕೆ

ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಾಹಿತಿ ಸಂಗ್ರಹಿಸುವಾಗ ಗೋವಿಂದರಾವ್ ಯಾಳಗೆ, ಗಂಗಾಧರ ದೇಶಪಾಂಡೆ, ಕೇಶವರಾವ್ ಗೋಖಲೆ, ಅಣ್ಣೂ ಗುರೂಜಿ, ಚೆನ್ನಪ್ಪ ವಾಲಿ, ರಾಮಚಂದ್ರ ರಾವ್ ಕುಲಕರಣಿ, ಗಂಗಾಧರರಾವ್ ದೊಡ್ಮನೆ, ರಾಜಾರಾಮ್ ದೇಶಪಾಂಡೆ, ಬಾಬುರಾವ್ ಮಂಜಣ್ಣ, ಚಂದ್ರಕಾಂತ್ ಬಾಳಪ್ಪ, ಉಪಾಧ್ಯಾಯ ಬಸುಲಿಂಗಪ್ಪ, ಬಾ ಕಲ್ಯಾಣಿ ಶಕುಂತಲಾ, ಕುರ್ತುಕೋಟಿ ಸ್ವಾತಂತ್ರ್ಯ ಹೋರಾಟಗಾರರನ್ನು ಗುರುತಿಸಬಹುದಾಗಿದೆ.

**ಗೋವಿಂದರಾವ್ ಯಾಳಗಿಯವರು:** ಬೆಳಗಾವಿ ಜಿಲ್ಲೆಯ ಪ್ರಾರಂಭಿಕ ಸ್ವಾತಂತ್ರ್ಯ ಹೋರಾಟಗಾರರು. ಇವರ ಮನೆಯ ಸ್ವಾತಂತ್ರ್ಯ ಯೋಧರ ನೆಲೆಯಾಗಿದ್ದು, ಕ್ರಾಂತಿ ಕಾರ್ಯಕರ್ತ ಚಟುವಟಿಕೆಗಳ ಕೇಂದ್ರವಾಗಿತ್ತು. ಇಡೀ ಕುಟುಂಬವೇ ರಾತ್ರಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿತ್ತು. ಈ ಕುಟುಂಬ ದೇಶಭಕ್ತಿಗೆ ಪ್ರೇರಕ ಶಕ್ತಿಯಾಗಿತ್ತು. ಇವರು ತಿಲಕರ ರಾಜಕೀಯ ಚಿಂತನೆಗಳಿಂದ ಪ್ರಭಾವಿತರಾಗಿ ಹನುಮಂತ ರಾವ್ ಕೌಜಲಗೆ ಅವರೊಂದಿಗೆ ಸೇರಿ ಮ್ಯಾಜಿನಿ ಕ್ಲಬ್‌ನ್ನು ಸ್ಥಾಪಿಸಿದರು[1]. ಇದು ಒಂದು ಕ್ರಾಂತಿಕಾರಿ ಸಂಸ್ಥೆಯಾಗಿದ್ದು, ಅಂದಿನ ಯುವಕರಿಗೆ

---

1 ಸೂರ್ಯನಾಥ್‌ಕಾಮತ್. (1974). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು–ಸಂಪುಟ–1*

**Please cite this article as:** ಪವಿತ್ರ. ವಿ (2025). ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(1), 39–43

ಕುಸ್ತಿ ಇನ್ನಿತರ ಕ್ರಾಂತಿಕಾರಕ ಚಟುವಟಿಕೆಗಳ ಬಗ್ಗೆ ತರಬೇತಿ ನೀಡುತ್ತಿದ್ದರು.

1905 ಮತ್ತು 1906 ರಲ್ಲಿ ಗೋವಿಂದರಾವ್‌ರವರು ಗಣೇಶೋತ್ಸವನ್ನು ನಡೆಸಿದರು. ಈ ಸಂದರ್ಭದಲ್ಲಿ ತಿಲಕರು ಬೆಳಗಾವಿಗೆ ಭೇಟಿ ನೀಡಿ ಸ್ಮರಿಸಿದರು. ಇವರ ಸ್ಮರಣವಾಗಿ ಜಂಡಾ ಸರ್ಕಲ್ ಬಳಿ ಗಣೇಶ ವಿಗ್ರಹವನ್ನು ಪ್ರತಿಷ್ಠಾಪಿಸಿಲಾಗಿದೆ. ಇಲ್ಲಿಯೇ ಸ್ವರಾಜ್ಯ ಸ್ಟೋರ್ ಮತ್ತು ಗಣೇಶ್ ವಿದ್ಯಾಲಯವನ್ನು ಸ್ಥಾಪಿಸಿದರು. 1907ರಲ್ಲಿ ಸ್ವಯಂ ಸೇವಕರನ್ನು ಸಂಘಟಿಸಿ, ಮದ್ಯದಂಗಡಿಗಳ ಮೇಲೆ ಪಿಕೆಟಿಂಗ್ ಮಾಡಿದರು. ಪರಿಣಾಮವಾಗಿ 15 ದಿನಗಳ ಕಾಲ ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದರು. ಎಂದು ಸ್ವಾತಂತ್ರ್ಯ ಸಂಗ್ರಾಮದ ಕೃತಿಯಲ್ಲಿ ಶಕುಂತಲ ಕುರ್ತಕೋಟಿಯವರು ದಾಖಲಿಸಿದ್ದಾರೆ. ಹೀಗೆ ಯಾಳಗಿಯವರು 1923ರ ಚಳುವಳಿಯ ಹೋರಾಟದಲ್ಲಿ ಸಕ್ರಿಯಾಗಿ ಭಾಗವಹಿಸಿ, 1923ರಲ್ಲಿ ದೈವಾದೀನರಾದರು. ನಂತರ ಇವರು ಕುಟುಂಬದವರಾದ ಕೃಷ್ಣರಾವ್ ಯಾಳಗಿವರು 1924ರಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಪಂಪಾ ಸರೋವರ ಅಥವಾ ಕಾಂಗ್ರೆಸ್ ಭಾವಿ ನಿರ್ಮಾಣದ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದರು[2]. ನಂತರ ಮತ್ತೊಬ್ಬ ಕುಟುಂಬ ಸದಸ್ಯರಾದ ಜೀವನರಾವ್ ಯಾಳಗಿಯವರು 1930ರ ಉಪ್ಪಿನ ಸತ್ಯಾಗ್ರಹದಲ್ಲಿ ಪ್ರಮುಖ ಪಾತ್ರ ವಹಿಸಿದರು. 1932ರಲ್ಲಿ ಸಾರ್ವಜನಿಕ ಭಾಷಣ ಮಾಡಿ ದಸ್ತಗಿರಿಯಾದರು. ನಂತರ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ, ಹಿಂಡಲಗಿ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸಿದರು. ಇವರ ಪತ್ನಿ ರಮಾಬಾಯಿ ಯಾಳಗಿಯವರು ಸಹ ಪತಿಯೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. 1940 ರಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಇವರು ಹೆಣ್ಣು ಮಕ್ಕಳಲ್ಲಿ ಧೈರ್ಯ ತುಂಬಿ ಹೋರಾಟಕ್ಕೆ ಹುರಿದುಂಬಿಸಿದರು. ಇದರಿಂದ ರಮಾಬಾಯಿ ಯಾಳಗಿಯವರು ಪ್ರೇರಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ಗಜಾನನ ಯಾಳಗಿ, ವಿಠ್ಠಲ್‌ರಾವ್ ಯಾಳಗಿ, ಗಾಂಧೀಜಿಯವರು 1936ರಲ್ಲಿ ಬೆಳಗಾವಿಗೆ ಭೇಟಿ ನೀಡಿದಾಗ ಅವರೊಂದಿಗೆ ಇದ್ದು ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿದ್ದರು.

**ಕೇಶವರಾವ್ ಗೋಖಲೆ**

ಶ್ರೀಯುತರು ಬೆಳಗಾವಿಯಲ್ಲಿ 1896ರಲ್ಲಿ ಜನಿಸಿದರು. ಬೆಳಗಾವಿಯ ನಿವಾಸಿಗಳಾದ ಕೇಶವರಾವ್ ಗೋಖಲೆ ಅವರು ಬಾಲಗಂಗಾಧರ ತಿಲಕ್ ಮತ್ತು ಮಹಾತ್ಮ ಗಾಂಧೀಜಿ ಅವರಿಂದ ಪ್ರೇರಿತರಾಗಿದ್ದವರು. ಹಾಗೂ ಗಂಗಾಧರ ದೇಶಪಾಂಡೆಯವರು ಸಮಕಾಲೀನರು ಪೂರ್ಣಯ್ಯ ಪರಗಿಸನ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ರಾಷ್ಟ್ರೀಯ ಚಟುವಟಿಕೆಗಳಲ್ಲಿ ಗಮನಹರಿಸಿದರು. ಸ್ವದೇಶಿ ತತ್ವಗಳಿಂದ ಪ್ರಭಾವಿತರಾಗಿ ಬಾಲಮೋಹನ ಸ್ವದೇಶಿ ಭಂಡಾರ ಎಂಬ ಸ್ವದೇಶಿ ಅಂಗಡಿಯನ್ನ ಪ್ರಾರಂಭಿಸಿ. ಸ್ವದೇಶಿ ವಸ್ತುಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ನಂತರ ಇವರು ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ಬೆಳಗಾವಿಯಿಂದ ಪ್ರಾರಂಭಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಈ ಪತ್ರಿಕೆಯನ್ನು ಹೊರ ತರಲು ತಮ್ಮ ಪತ್ನಿಯ ಆಭರಣಗಳನ್ನೆಲ್ಲ ಮಾರಿ 5,000ಗಳನ್ನ ತಂದು. ಈ ಒಂದು ಪತ್ರಿಕೆಯ ಹೊರಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಮತ್ತು ಕನ್ನಡ ಭಾಷೆ ಅಭಿಮಾನ ಇದ್ದು, ಇವರು ತಮ್ಮ ಕೊನೆ ಹೆಸರು ಇರುವವರೆಗೂ ಸಹ ಕನ್ನಡದಲ್ಲಿ ಮಾತನಾಡುತ್ತಿದ್ದರು. 1937ರಲ್ಲಿ ಬೆಳಗಾವಿ ದಕ್ಷಿಣ ಭಾಗದಿಂದ ಮುಂಬೈ ವಿಧಾನಸಭೆಗೆ ಆಯ್ಕೆಗೊಂಡರು. ನಂತರ 'ರಷ್ಯಾ ದೇಶದ ಸರ್ವಾಂಗೀಣ ಸರ್ವೋದಯ' ಎಂಬ ಪುಸ್ತಕವನ್ನು ಬರೆದರು. 1933 ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಹರಿಜನೋದ್ಧಾರಕ್ಕಾಗಿ ಕಾರ್ಯಕ್ರಮಗಳಲ್ಲಿ

[2] ಸಂದರ್ಶನ: ಶಿವಕುಮಾರ. ಎ. ಸಂಶೋಧಕರು, ಬೆಂಗಳೂರು, ದಿನಾಂಕ 25/01/2025

ತೊಡಗಿದರು. ಇವರು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳಲ್ಲಿ ನಂಬಿಕೆ ಇಟ್ಟಿದ್ದರು. ಹಾಗಾಗಿ ಹರಿಜನರ ಉದ್ಧಾರಕ್ಕೆಂದು ಇವರು ಕೆಲವು ದೇವಾಲಯಗಳನ್ನು ತೆರೆದರು. ಅವರ ಧರ್ಮಪತ್ನಿಯಾದ ರಮಾಬಾಯಿ ಸಹಜೀವನ ಎಂಬ ಆತ್ಮಚರಿತ್ರೆಯಲ್ಲಿ ಕೇಶವರಾಯರ ದೇಶ ಸೇವೆಯ ಬಗ್ಗೆ ಬರೆದುಕೊಂಡಿದ್ದಾರೆ.

**ಗಂಗಾಧರರಾವ್ ದೇಶಪಾಂಡೆ**

ಶ್ರೀಯುತರು ಕರ್ನಾಟಕ ಸಿಂಹ ಎಂಬ ಖ್ಯಾತಿಗೆ ಪಾತ್ರರಾಗಿದ್ದು, ಇವರು ಪ್ರಾರಂಭದಲ್ಲಿ ತಿಲಕರ ಪ್ರಭಾವ ನಂತರ ಗಾಂಧಿಜಿಯವರಿಂದ ಪ್ರಭಾವಿತರಾದ ನಿಷ್ಠಾವಂತ ಕಾಂಗ್ರೆಸ್ಸಿಗರು. ರಚನಾತ್ಮಕ ಕಾರ್ಯಕರ್ತರು ಸ್ವದೇಶ ಅಭಿಮಾನಿಗಳು ಇವರು ರಾಯಭಾಗದ ಹತ್ತಿರ ಜಲಾಲಪುರದಲ್ಲಿ ಜನಿಸಿದರು. ನಂತರ ಬೆಳಗಾವಿಯಲ್ಲಿ ಶಿಕ್ಷಣವನ್ನ ಪ್ರಾರಂಭಿಸಿರಿದರು. ಇಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ತಿಲಕರು ಗೋಪಾಲಕೃಷ್ಣ ಗೋಖಲೆ, ರಾನಡೆ, ಸಾವರ್ಕರ್ ಇಂತಹವರ ಭಾಷಣ ಮತ್ತು ಬರಹಗಳಿಂದ ಹೆಚ್ಚು ಪ್ರಭಾವಿತರಾದರು. ಸಂಪಾದಕರಾಗಿಯೂ ಸಹ ಸೇವೆಯನ್ನು ಸಲ್ಲಿಸಿದರು. ನಂತರ ಬಿ.ಎ. ಪದವಿಯನ್ನು ಮುಗಿಸಿ ಬೆಳಗಾವಿಗೆ ಬಂದು ವಕೀಲ ವೃತ್ತಿಯನ್ನು ಪ್ರಾರಂಭಿಸಿದರು.

ಇವರ ತಂದೆಯವರಿಗೆ ಗಂಗಾಧರ ದೇಶಪಾಂಡವರು ರಾಷ್ಟ್ರೀಯ ಚಟುವಟಿಕೆಗಳ ಕಡೆ ಗಮನ ಹರಿಸುವುದು ಅಸಮಾಧಾನವನ್ನು ತಂದಿತ್ತು. ಹಾಗಾಗಿ ಪುಣೆಗೆ ಹೋಗಿ ಲೋಕಮಾನ್ಯ ತಿಲಕರನ್ನ ಭೇಟಿಯಾಗಿ "ಲೋಕಮಾನ್ಯರೇ ನೀವು ಮಾಡುತ್ತಿರುವ ಕಾರ್ಯ ದೊಡ್ಡದು, ದೇಶಕ್ಕೆ ಸ್ವರಾಜ್ಯ ಬರಬೇಕೆಂದು ನೀವು ಪ್ರಯತ್ನಿಸುವಿರಿ ಇದು ಸರಿಯೇ ಆದರೆ ನನ್ನ ಮಗನನ್ನು ನಿಮ್ಮೊಂದಿಗೆ ಎಳಿಯಬೇಡಿರಿ ನನಗೆ ಇರುವುದು ಒಬ್ಬನೇ ಮಗ, ಮೇಲಾಗಿ ನಮ್ಮ ಮನೆತನವು ಶ್ರೀಮಂತಿಕೆಯಿಂದ ಕೂಡಿದೆ. ಶ್ರೀಮಂತರ ಒಬ್ಬನೇ ಮಗ ಎಲ್.ಎಲ್.ಬಿ ಪಾಸು ಆಗಿರುವಾಗ ಅವನನ್ನೇಕೆ ನಿಮ್ಮೊಡನೆ ಎಳಿಯುತ್ತೀರಿ ಬೇಕಾದಷ್ಟು ದಡ್ಡ ಬಡವ ಹುಡುಗರು ಇದ್ದಾರೆ. ಅವರ ಮೇಲೆ ನೀವು ದಯ ತೋರಿ ನನ್ನ ಮಗನನ್ನ ಬಿಟ್ಟುಬಿಡಿ" ಎಂದು ಕೇಳಿಕೊಂಡರು[3]. ಆಗ ಲೋಕಮಾನ್ಯ ತಿಲಕರು, ಸಾಹೇಬರೇ ಬಡವರಿಗೆ ತಮ್ಮ ಹೊಟ್ಟೆ ತುಂಬಿಕೊಳ್ಳಲು ದುಡ್ಡಿನ ಸಂಪಾದನೆಗಾಗಿ ಉದ್ಯೋಗ ಮಾಡಬೇಕಾಗುತ್ತದೆ. ನನ್ನ ಕೆಲಸದಲ್ಲಿ ದಡ್ಡರಿಗೆ ಸ್ಥಾನವಿಲ್ಲ ನೀವೇ ಹೀಗೆ ಅಂದರೆ ಬಡವರು ತಮ್ಮ ಮಕ್ಕಳನ್ನು ಹೇಗೆ ಚಳುವಳಿಗೆ ಕೊಡಬಲ್ಲರು ಎಂದು ಮರು ಪ್ರಶ್ನೆಯನ್ನು ಹಾಕಿದರು. ಇದರಿಂದ ಬಾವು ಸಾಹೇಬರು ಆಗಲಿ ತಿಲಕ್ ಮಹಾಶಯರೇ ಇಂದಿನಿಂದ ನನ್ನ ಮಗನನ್ನು ದೇಶಕ್ಕಾಗಿ ನಿಮ್ಮ ಕಡೆಗೆ ಅರ್ಪಿಸಿದ್ದೇನೆ ಎಂದು ಹೇಳಿದರು. ಈ ಮಾತುಗಳಿಂದ ಮತ್ತಷ್ಟು ಪ್ರೇರಣೆಯಾದಂತಹ ಗಂಗಾಧರರಾವ್ ದೇಶಪಾಂಡೆಯವರು ಬಹಳ ಆತ್ಮ ಅಭಿಮಾನದಿಂದ ಸಂತೋಷದಿಂದ ರಾಷ್ಟ್ರೀಯ ಹೋರಾಟದ ಕಡೆ ಹೊರಟರು.

ತಿಲಕರ ಬಲಗೈಯಂತಿದ್ದ ಗಂಗಾಧರ್‌ರಾವ್ ತಿಲಕರ ಚತುಸೂತ್ರಗಳನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಪ್ರಚಾರ ಮಾಡಿದರು. 1907ರಲ್ಲಿ ಬೆಳಗಾವಿಯಲ್ಲಿ ಮದ್ಯದ ಅಂಗಡಿಗಳ ಮುಂದೆ ಪಿಕೆಟಿಂಗ್ ಅನ್ನ ಸಂಘಟಿಸಿ, ಜನತೆಯನ್ನು ಪ್ರೇರೇಪಿಸಿ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಪರಿಣಾಮವಾಗಿ ಇವರು ಸೆರೆಮನೆ ವಾಸವನ್ನು ಅನುಭವಿಸಬೇಕಾಯಿತು. 1923ರಲ್ಲಿ ಹುದಲಿಯಲ್ಲಿ ತಮ್ಮ ಜಮೀನನಲ್ಲಿ ಖಾದಿ ಕೇಂದ್ರವನ್ನು ಸ್ಥಾಪಿಸಿದರು. ಇದು 1925ರಲ್ಲಿ ಕಾರ್ಯರಾಂಭವಾಯಿತು.

ಗಂಗಾಧರ ದೇಶಪಾಂಡೆ ಅವರು 1924ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಮಹಾ ಅಧಿವೇಶನವನ್ನು ಬೆಳಗಾವಿಯಲ್ಲಿ ಸಂಘಟಿಸಿದರು. ಇದರ ಸ್ವಾಗತ

[3] ಸೂರ್ಯನಾಥ್‌ಕಾಮತ್ (1974), *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ–I.* ಪುಟ. 1001

ಸಮಿತಿ ಸಕಲ ಸಿದ್ದತೆಗಳನ್ನು ಮಾಡಿದರು. ವಿಶೇಷವಾಗಿ ಈ ಅಧಿವೇಶನದ ಅಧ್ಯಕ್ಷತೆಯನ್ನು ಮಹಾತ್ಮ ಗಾಂಧೀಜಿಯವರು ವಹಿಸಿದ್ದರು. ಈ ಬೆಳಗಾಂ ಕಾಂಗ್ರೆಸ್ ಅಧಿವೇಶನವನ್ನು ಮೂರು ದಿವಸಗಳ ಕಾಲ ಗಂಗಾಧರಾರಾವ್ ದೇಶಪಾಂಡೆ ಅವರು ಬಹಳ ಸಕ್ರಿಯವಾಗಿ ಸಂಘಟನೆಯನ್ನು ಮಾಡಿದ್ದರು.

1930ರಲ್ಲಿ ಗಂಗಾಧರ ದೇಶಪಾಂಡೆ ಅವರು ಮಹಾತ್ಮ ಗಾಂಧೀಜಿಯವರ ಕರೆಯನ್ನು ಒಪ್ಪಿ ಬೆಳಗಾವಿ ಜಿಲ್ಲೆಯಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಸಂಘಟಿಸಿದರು. ಸೆರೆಮನೆ ವಾಸವನ್ನು ಅನುಭವಿಸಿದರು. 1936ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಗಂಗಾಧರ್ ರಾವ್ ದೇಶಪಾಂಡೆಯವರು ತಮ್ಮ ಭಾಷಣಗಳ ಮೂಲಕ ಮುಂಬೈ ಪ್ರಾಂತ್ಯದಲ್ಲಿ ಜನರನ್ನ ಆಕರ್ಷಿಸಿದರು. 'ಅಖಿಲ ಭಾರತ ಗಾಂಧಿ ಸೇವಕ ಸಂಘದ' ಅಧಿವೇಶನವನ್ನು ಗಂಗಾಧರ ದೇಶಪಾಂಡೆ ಅವರು ಖಾದಿಪ್ರಿಯರಾಗಿದ್ದು, ಹುದಲಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯನ್ನು ತಮ್ಮ ಸ್ವಂತ ಜಮೀನಿನಲ್ಲಿ ಪ್ರಾರಂಭಿಸಿದರು. 1925ರಲ್ಲಿ ಕಾರ್ಯಕ್ರಮ ಮಾಡಿದ್ದು, ಎರಡರ ಚಲೇಜಾವ್ ಚಳುವಳಿಯ ಸಂದರ್ಭದಲ್ಲಿ ರೈಲು ತುಂಬುವುದು ಈ ಚಳುವಳಿಯ ಉದ್ದೇಶವಲ್ಲ, ಇದು ಬ್ರಿಟಿಷರ ತಿಳಿದು ಪ್ರತಿಯೊಬ್ಬರು ತಾವೇ ಮುಖಂಡರಾಗಿ ಈ ಕೊನೆಯ ಹೋರಾಟ ನಡೆಸಬೇಕು ಎಂದು ಈ ಭಾಷಣದಿಂದ ಗಂಗಾಧರ ದೇಶಪಾಂಡೆ ಅವರನ್ನು ದಸ್ತಗಿರಿ ಮಾಡಲಾಯಿತು.

**ಚೆನ್ನಪ್ಪ ವಾಲಿಯವರು**

ಬೆಳಗಾವಿ ಜಿಲ್ಲೆಯ ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರರು. ಇವರು ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ, ನಂತರ ಬೈಲಹೊಂಗಲ, ಸವದತ್ತಿ, ಬೆಳಗಾವಿ ಮತ್ತು ಖಾನಾಪುರಗಳಲ್ಲಿ ಅರಣ್ಯ ಸತ್ಯಾಗ್ರಹ ನಡೆದಂತ ಸಂದರ್ಭದಲ್ಲಿ ಇವರು ಭಾಗವಹಿಸಿ, ಮತ್ತೆ ಜೈಲುವಾಸವನ್ನ ಅನುಭವಿಸಿದರು. ಮೂಲತಃ ಅಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದ ಇವರು ಚಳುವಳಿ ಕಡೆಗೆ ತಮ್ಮ ಗಮನ ಹರಿಸಿದರು ಇವರಿಗೆ ಕಿತ್ತೂರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಇಂತಹ ಒಂದು ಹೋರಾಟಗಾರರ ಸ್ಫೂರ್ತಿ ಇವರ ಮೇಲೆ ಹೆಚ್ಚಾಗಿ ಇತ್ತು. ಇವರು 1930ರಲ್ಲಿ ಮಿಠಾಯಿ ಮತ್ತು ಬಳೆ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದರು. ಸಂಪಗಾವಿಯಲ್ಲಿ ಭಾಷಣವನ್ನು ಮಾಡಿದ್ದರಿಂದ ನಂತರ 1932 ರಲ್ಲಿ ಮತ್ತೆ ದಸ್ತಗಿರಿ ಮಾಡಿ, ಶಿಕ್ಷೆಗೆ ಒಳಗಾದರು. ಸ್ವಾತಂತ್ರ್ಯ 1934ರಲ್ಲಿ ತಾಲೂಕಿನಲ್ಲಿ ಮತ್ತೆ ಕಾಂಗ್ರೆಸ್ ಪ್ರಚಾರವನ್ನು ಮಾಡಿದರು. ನಂತರ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಅಂಬಲಿ, ಚಟ್ಟೋಪಾಧ್ಯಾಯ, ಶ್ರೀನಿವಾಸ ಮಲ್ಯ ಇವರೊಂದಿಗೆ ಬ್ರಿಟಿಷ್ ವಿರೋಧಿ ಕೃತ್ಯಗಳನ್ನ ಮಾಡಿದರು. ಸರ್ಕಾರಿ ವಿರೋಧಿ ಘೋಷಣೆಗಳನ್ನು ಹೋಗುತ್ತಾ, ಗುಪ್ತ ಸಭೆಗಳನ್ನು ಮಾಡಿ, ಸರ್ಕಾರಿ ಕಛೇರಿಗಳ ಮೇಲೆ ದಾಳಿ ನಡೆಸಿ ದಾಖಲೆಯನ್ನು ಸಂಗ್ರಹಿಸಿ ಸುಟ್ಟುಹಾಕುತ್ತಿದ್ದರು[4].

**ನಾಗಲಿಂಗ ಕೃಷ್ಣಪ್ಪ ಪತ್ತಾರ**

ಶ್ರೀಯುತರು ನಾಗಲಿಂಗಪ್ಪನವರ 7ನೇ ತರಗತಿ ಕಲಿಯುವಾಗ 1942ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರವೇಶ ಮಾಡಿದರು. 9ನೇ ಅಗಸ್ಟ್ 1942ರಂದು ಗಾಂಧೀಜಿಯವರ ಬಂಧನದ ವಾರ್ತೆಯನ್ನು ತಿಳಿದ ಕೂಡಲೆ ಇವರು ಶಾಲಾ ಬಂದ್ ಕಾರ್ಯಕ್ರಮ ಸಂಘಟನೆ ಮಾಡಿದರು. ಮನೆಗೆ ಬರುತ್ತಿದ್ದ ಸ್ವಾತಂತ್ರ್ಯ ಹೋರಾಟ ಯೋಧರಿಗೆ ಆಹಾರ ಪೂರೈಕೆ, ಪೋಲಿಸ್ ಚಟುವಟಿಕೆಗಳ ವರದಿ ಕೊಡುವಿಕೆ ಮುಂತಾದವುಗಳಿಗಾಗಿ ಮನೆ ಬಿಟ್ಟು ಹೋಗಿ ಎರಡು ಮೂರು ದಿನಗಳ ಕಾಲ ಹೊಲಗಳಲ್ಲಿ ಅಜ್ಞಾತವಾಸ ಅನುಭವಿಸಿದರು. ನಂದಗಡ ಪೋಸ್ಟಮ್ಯಾನ್ ಮೇಲೆ ವಿದ್ಯಾರ್ಥಿಗಳೊಂದಿಗೆ ಸೇರಿ ಧಾಳಿ ಮಾಡಿ,

---

[4] ದೇಶಪಾಂಡೆ, ಬಾ.ಯಾ. (1973). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ, ಸಂಪುಟ–1,* ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ.

ದಾಖಲೆಗಳನ್ನು ಸುಟ್ಟು ಹಾಕಿ, ಅಲ್ಲಿಂದ ಪರಾರಿಯಾದರು. ಗಂದಿಗವಾಡ, ದೇವಗಾಂವಿ, ಯೋಧರ ಬೆಂಬತ್ತಿ ಶಾಲೆಯನ್ನು ಬಿಟ್ಟು ತಿರುಗಾಡಿದರು. ಹೀಗೆ ಗಾಂಧೀಜಿವರಿಂದ ಪ್ರೇರಣೆಗೊಂಡು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಬೆಳಗಾವಿ ಜಿಲ್ಲೆಯ ಪ್ರಮುಖರಲ್ಲಿ ಇವರು ಒಬ್ಬರು.

**ಪರಾಮರ್ಶನ ಗ್ರಂಥಗಳು**


- ದೇಶಪಾಂಡೆ. ಬಾ. ಯಾ. (1973). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ.* ಸಂಪುಟ–1: ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ.
- ಕುಲಕರ್ಣಿಆರ್.ಎಚ್. (1992). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ.* ವೆಂಕಟೇಶ್ವರ ಪ್ರಕಾಶನ.
- ಪ್ರಕಾಶ ಗಿರಿಮಲ್ಲಪ್ಪ. *ಸ್ವಾತಂತ್ರ್ಯ ಹೋರಾಟದಲ್ಲಿ ಬೆಳಗಾವಿ.* ಕನ್ನಡ ಸಾಹಿತ್ಯ ಪರಿಷತ್ತು.
- ರಾಮಚಂದ್ರ ವಡವಿ. (1970). *ಗಾಂಧೀ ಮತ್ತು ಕರ್ನಾಟಕ.* ಸಂಯುಕ್ತ ಕರ್ನಾಟಕ ಪ್ರೆಸ್.
- ಸೂರ್ಯನಾಥ್‌ಕಾಮತ್. (1974). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು.* ಸಂಪುಟ–1.